ಓ ಎಸ್ ನಂಃ 144-14
ಡಿ ಡಬ್ಲ್ಯೂ ಃ 4

ದಿಃ 21-11-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 1 ನೇ ವಾದಿ ಪರ ಶ್ರೀ ಎಂ ಎಂ ಎ ವಕೀಲರಿಂದ

8. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನಾನು ಎಸ್ ಎಸ್ ಎಲ್ ಸಿಯನ್ನು ದೊಡ್ಡ ಆಲದ ಮರದ ಶಾಲೆಯಲ್ಲಿ ಮಾಡಿದ್ದು, ಸಿರಿಗೆರೆ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಗೆ ಸೇರಿದ್ದಾಗಿರುತ್ತದೆ. ನಾನು 1976-77 ರಲ್ಲಿ 10 ನೇ ತರಗತಿ ಪರೀಕ್ಷೆಯನ್ನು ತೆಗೆದುಕೊಂಡಿರುತ್ತೇನೆ.

9. ನಾನು ಪ್ಯಾಸೆಂಜರ್ ಆಟೋ ಓಡಿಸುತ್ತೇನೆ. ನಾನು ದಿನಾಂಕಃ 01-06-1959 ರಲ್ಲಿ ಜನಿಸಿರುತ್ತೇನೆ. ನಾನು ನನ್ನ ಸ್ವಂತ ಆಟೋವನ್ನು ಓಡಿಸುತ್ತೇನೆ. ನನಗೆ ಆಟೋವನ್ನು ಓಡಿಸಲು ಪರ್ಮಿಟ್ ಮತ್ತು ಡಿ ಎಲ್ ಇತ್ತು. ನಾನು ವಾಸ ಮಾಡುವ ಮನೆ ರಾಮೋಹಳ್ಳಿ. ನಾನು ಬೆಂಗಳೂರು ಸೆಂಟ್ರಲ್ ಆರ್ ಟಿ ಓ ಕಛೇರಿಯಿಂದ ಡಿ ಎಲ್ ಪಡೆದಿರುತ್ತೇನೆ. ನಾನು ಸೆಕೆಂಡ್ ಹ್ಯಾಂಡ್ ವಾಹನಕ್ಕೆ ಪರ್ಮಿಟ್ ಪಡೆದಿರುತ್ತೇನೆ. ನಾನು ಪಡೆದ ಡಿ ಎಲ್ ಪ್ಯಾಸೆಂಜರ್ ಆಟೋಗೆ ಸಂಬಂಧಿಸಿರುತ್ತದೆ. ಈಗಲೂ ಸಹ ನನ್ನ ಕಡೆ ಲೈಸೆನ್ಸ್ ಇದ್ದು ಆದರೆ ಈಗ ನಾನು ಆಟೋ ಓಡಿಸುವುದಿಲ್ಲ. ನಾನು ಮೊದಲನೇ ಬಾರಿಗೆ ಡಿ ಎಲ್ ನ್ನು 1978 ರಲ್ಲಿ ಪಡೆದಿರುತ್ತೇನೆ. ನಾನು ಮೊದಲನೆ ಬಾರಿಗೆ ಡಿ ಎಲ್ ನ್ನು 11-03-1991 ರಲ್ಲಿ ಪಡೆದಿರುತ್ತೇನೆ ಅಲ್ಲಿಯವರೆಗೂ ನನಗೆ ಯಾವುದೇ ವಾಹವನ್ನು ಓಡಿಸಲು ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮೊದಲನೆ ಬಾರಿ ಪಡೆದ ಡಿ ಎಲ್ ಯಾವಾಗ ಮುಕ್ತಾಯಗೊಂಡಿರುತ್ತದೆ ಎಂಬ ದಿನಾಂಕ ನೆನಪಿಲ್ಲ. ನಾನು ಮೊದಲು ಆಟೋ ರಿಕ್ಷಾವನ್ನು ರಾಮೋಹಳ್ಳಿ ಮತ್ತು ಬೆಂಗಳೂರು ಸಿಟಿಯಲ್ಲಿ ಓಡಿಸುತ್ತಿದ್ದೆ. ರಾಮೋಹಳ್ಳಿಯಿಂದ ಬೆಂಗಳೂರು 24 ಕಿಲೋ ಮೀಟರ್ ಆಗುತ್ತದೆ. ರಾಮೋಹಳ್ಳಿಯಿಂದ ಬೆಂಗಳೂರಿಗೆ ಆಟೋದಲ್ಲಿ ಹೋಗಲು ಸುಮಾರು 1 ಗಂಟೆ ಸಮಯಾವಕಾಶ ಬೇಕಾಗುತ್ತದೆ. ರಾಮೋಹಳ್ಳಿ ಕೇತೋಹಳ್ಳಿಗಿಂತ ದೊಡ್ಡ ಊರು ಎಂದರೆ ನಿಜ. ರಾಮೋಹಳ್ಳಿಯಲ್ಲಿ ಬಹಳ ದಿನಸಿ ಅಂಗಡಿಗಳು ಇವೆ ಎಂದರೆ ಆಗ ಇರಲಿಲ್ಲ ಎಂದರೆ 1975, 1985 ರ ಒಳಗೆ ಇರಲಿಲ್ಲ ಎಂದು ಹೇಳುತ್ತಾರೆ. ಆಗ ಕೇತೋಹಳ್ಳಿಯಲ್ಲಿ ಶಿವರುದ್ರಯ್ಯರವರ ದಿನಸಿ ಅಂಗಡಿ ಮಾತ್ರ ಪ್ರಸಿದ್ದವಾಗಿರುತ್ತದೆ. ನಾನು ದಿನಸಿ ಸಾಮಾನು ಖರೀದಿಸಲು ತಿಂಗಳಿಗೆ ಒಂದು ಬಾರಿ ಅಂಗಡಿಗೆ ಹೋಗುತ್ತೇನೆ. ನಾನು ದಿನಸಿ ಅಂಗಡಿಯಲ್ಲಿ 50-100 ರೂ ಸಾಮಾನುಗಳನ್ನು ಖರೀದಿಸುತ್ತಿದ್ದೆ. 1981 ರಲ್ಲಿ ಕೇತೋಹಳ್ಳಿಯಲ್ಲಿ ಆಟೋ ರಿಕ್ಷಾಗಳು ಇದ್ದವೊ ಇಲ್ಲವೊ ಗೊತ್ತಿಲ್ಲ.

10. ನನಗೆ ಶಿವರುದ್ರಯ್ಯರವರು ಸಂಬಂಧಿಕರಲ್ಲ ಅವರು ನನಗೆ 35-40 ವರ್ಷಗಳಿಂದ

ಪರಿಚಯವಿರುತ್ತಾರೆ. ಶಿವರುದ್ರಯ್ಯರವರು 1982 ರಲ್ಲಿ ಮರಣ ಹೊಂದಿರುತ್ತಾರೆ. ಶಿವರುದ್ರಯ್ಯರವರು ತಮ್ಮ ಕುಟುಂಬದಲ್ಲಿ ಕಾನೂನಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ, ಅವರ ವ್ಯವಹಾರ ಬಗ್ಗೆ ಮತ್ತು ಅವರ ಆಸ್ತಿ ಪಾಸ್ತಿಗಳ ಬಗ್ಗೆ ನನ್ನ ಜೊತೆ ಚರ್ಚೆ ಮಾಡುತ್ತಿರಲಿಲ್ಲ. ಶಿವರುದ್ರಯ್ಯರವರ ಮಗ 1981 ರಲ್ಲಿ ಕಾನೂನು ಓದುತ್ತಿದ್ದು ಅವರು ಈಗ ವಕೀಲರಾಗಿರುತ್ತಾರೆ. ಶಿವರುದ್ರಯ್ಯರವರ ಕುಟುಂಬದ ಬಹುತೇಕ ಸದಸ್ಯರ ಪರಿಚಯ ನನಗೆ ಇದೆ. ಶಿವರುದ್ರಯ್ಯರವರ ವ್ಯಾಪಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು. ದಿನಾಂಕಃ 05-12-1981 ರಲ್ಲಿ ನಾನು ಶಿವರುದ್ರಯ್ಯರವರ ಅಂಗಡಿಗೆ ಹೋಗಿ ನನ್ನ ಮನೆಯನ್ನು ಸಾಯಂಕಾಲ 5.30 ವರೆಗೆ ಸೇರಿರುತ್ತೇನೆ. ಆ ದಿನ ನಾನು ಬೇರೆ ಬಾಡಿಗೆಗೆ ಹೋಗಿರುವುದಿಲ್ಲ.

11. ನಾನು ಈ ದಾವೆಯನ್ನು ಹೊರತುಪಡಿಸಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿರುವುದಿಲ್ಲ. ನಾನು ಸಾಕ್ಷಿಯಾಗಿ ಯಾವುದೇ ದಾಖಲೆಗಳಲ್ಲಿ ರುಜು ಮಾಡಿರುವುದಿಲ್ಲ. ದಿನಾಂಕಃ 05-12-1981 ರ ಮೊದಲು ಶಿವರುದ್ರಯ್ಯರವರು ನನ್ನ ಜೊತೆ ಮರಣ ಶಾಸನದ ಬಗ್ಗೆ ಚರ್ಚೆ ಮಾಡಿಲ್ಲ ಮತ್ತು ಆ ಮೊದಲು ತಾಲ್ಲೂಕು ಕಛೇರಿಗೆ ಹೋಗಿರುವುದಿಲ್ಲ. ನನಗೆ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಯಾರು ಪರಿಚಯವಿರಲಿಲ್ಲ. ಶಿವರುದ್ರಯ್ಯರವರು ಮದ್ಯಾಹ್ನ 2 ಗಂಟೆಗೆ ತಮ್ಮ ಹೆಂಡತಿಯಾದ ಪಾರ್ವತಮ್ಮರವರನ್ನು ತಮ್ಮ ಅಂಗಡಿಯಲ್ಲಿ ಕೂರಿಸಿ ಶಿವರುದ್ರಯ್ಯ ಹಾಗೂ ಶಿಕರಪ್ಪ ನನ್ನ ಜೊತೆ ಬಂದಿರುತ್ತಾರೆ. ಶಿವರುದ್ರಯ್ಯರವರು ತಮ್ಮ ಹೆಂಡತಿಗೆ ಅಂಗಡಿ ನೋಡಿಕೊಳ್ಳುವಂತೆ ತಿಳಿಸಿದ್ದು ಮರಣ ಶಾಸನದ ಬಗ್ಗೆ ನನ್ನ ಮುಂದೆ ಹೇಳಿಲ್ಲ. ಶಿಕರಪ್ಪರವರು ಗಣಪತಿಹಳ್ಳಿಯ ವಾಸಿಯಾಗಿರುತ್ತಾರೆ. ಶಿಕರಪ್ಪರವರು ವ್ಯವಸಾಯ ಮಾಡುತ್ತಾರೆ. ಆಗ ನನಗೆ ಹಾಗೂ ಶಿಕರಪ್ಪರವರಿಗೆ ಸುಮಾರು 40 ವರ್ಷಗಳಿಂದ ಪರಿಚಯ ಇದ್ದರು. ಶಿಕರಪ್ಪರವರು ಈಗ ತೀರಿಕೊಂಡಿದ್ದು ಯಾವ ದಿನಾಂಕ ತೀರಿಕೊಂಡರು ಗೊತ್ತಿಲ್ಲ. ಶಿವರುದ್ರಯ್ಯರವರು ತೀರಿಕೊಂಡಾಗ ನಾನು ನೋಡಲು ಹೋಗಿದ್ದು, ಶಿಕರಪ್ಪರವರು ತೀರಿಕೊಂಡಾಗ ನಾನು ನೋಡಲು ಹೋಗಿರಲಿಲ್ಲ. ನಾನು ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿಗೆ ಹೋದಾಗ ಅಲ್ಲಿ ಬೆರಳಚ್ಚುಗಾರರಿದ್ದು ಅವರ ವಯಸ್ಸು ಸುಮಾರು 60 ವರ್ಷ ಆಗಿರಬಹುದು. ನಾನು ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿಗೆ ಹೋದಾಗ ನೊಂದಣೆ ಕಛೇರಿ ತಾಲ್ಲೂಕು ಕಛೇರಿಯಲ್ಲಿಯೇ ಇತ್ತು. ನಾವು ತಾಲ್ಲೂಕು ಕಛೇರಿಗೆ ಮಧ್ಯಾಹ್ನ 3 ಗಂಟೆಗೆ ಹೋಗಿದ್ದು ಅಲ್ಲಿ 1 1/2 ಗಂಟೆ ಸಮಯ ಹಿಡಿದಿದ್ದು ಮಧ್ಯಾಹ್ನ 4.30 ಗಂಟೆಯವರೆಗೂ ಕೆಲಸ ಆಗಿರುತ್ತದೆ. ಟೈಪಿಂಗ್ ಯಂತ್ರ ಕನ್ನಡದ ಯಂತ್ರ ಆಗಿತ್ತು. ಟೈಪಿಸ್ಟ್ ರವರಿಗೆ ಮರಣ ಶಾಸನದ ಮಾಹಿತಿಯನ್ನು ಶಿವರುದ್ರಯ್ಯರವರು ಕೊಟ್ಟಿದ್ದರು. ಶಿವರುದ್ರಯ್ಯರವರು ತಾವು ಬರೆದುಕೊಂಡಿದ್ದ ಒಂದು ಪಟ್ಟಿಯನ್ನು ಬೆರಳಚ್ಚುಗಾರರಿಗೆ ಕೊಟ್ಟಿದ್ದು ಅದರಂತೆ ಬೆರಳಚ್ಚುಗಾರರು ಬೆರಳಚ್ಚು ಮಾಡಿದ್ದರು. ಶಿವರುದ್ರಯ್ಯರವರು ಬೆರಳಚ್ಚುಗಾರರಿಗೆ ಕೊಟ್ಟ ಪಟ್ಟಿಯ ವಿವರ ನನಗೆ ತಿಳಿದಿರಲಿಲ್ಲ. ಬೆರಳಚ್ಚುಗಾರರು ಮರಣ ಶಾಸನವನ್ನು

ಬೆರಳಚ್ಚು ಮಾಡುವವರೆಗೂ ನಾನು ಅಲ್ಲೇ ಇದ್ದೆ. ಆಗ ಶಿಕರಪ್ಪರವರು ಸಹ ನನ್ನ ಜೊತೆಯಲ್ಲಿಯೇ ಇದ್ದರು. ಬೆರಳಚ್ಚುಗಾರರು ಮರಣ ಶಾಸನವನ್ನು ಬೆರಳಚ್ಚು ಮಾಡುವಾಗ ನಾನು ಮತ್ತು ಶಿಕರಪ್ಪ ಸುಮ್ಮನೆ ಇದ್ದರಾ ಎಂದರೆ ಸುಮ್ಮನೆ ಇದ್ದೆವು ಎಂದು ಹೇಳುತ್ತಾರೆ. ಮರಣ ಶಾಸನದ ವಿಷಯವನ್ನು ಬೆರಳಚ್ಚುಗಾರರು ಶಿವರುದ್ರಯ್ಯರವರಿಗೆ ಓದಿ ಹೇಳಿದ್ದು, ಮರಣ ಶಾಸನದ ವಿಷಯ ನನಗೆ ಗೊತ್ತಿಲ್ಲ. ಶಿವರುದ್ರಯ್ಯರವರಿಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತಿತ್ತು. ಮರಣ ಶಾಸನವನ್ನು ಬೆರಳಚ್ಚು ಮಾಡಿದ ನಂತರ ಶಿವರುದ್ರಯ್ಯರವರು ಬೆರಳಚ್ಚುಗಾರರಿಗೆ ನೊಂದಣಿ ಮಾಡಿಸುವಂತೆ ತಿಳಿಸಿದ್ದು, ಅದಕ್ಕೆ ಬೆರಳಚ್ಚುಗಾರರು ಸಮಯ ಮುಗಿದಿದೆ ಎಂದು ಉತ್ತರಿಸಿದ್ದರು. ನಂತರ ನಾನು ಶಿಕರಪ್ಪ ಹಾಗೂ ಶಿವರುದ್ರಯ್ಯರವರನ್ನು ಕರೆದುಕೊಂಡು ಕೇತೋಹಳ್ಳಿಗೆ ಬಂದಿದ್ದು ನಂತರ ನಾನು ನನ್ನ ಊರಿಗೆ ಹೋಗಿರುತ್ತೇನೆ. ನಾವು ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿಯಿಂದ ಹೊರಟಾಗ ಸಾಯಂಕಾಲ **4-30** ಗಂಟೆ ಆಗಿತ್ತು. **5-30** ಗಂಟೆಗೆ ಐದು ನಿಮಿಷ ಕಡಿಮೆ ಇರುವಾಗ ನಾನು ಶಿಕರಪ್ಪರವರನ್ನು ಅವರ ಮನೆಗೆ ತಲುಪಿಸಿರುತ್ತೇನೆ. ಅವರ ಮನೆ ಕೇತೋಹಳ್ಳಿಯ ಶಿವರುದ್ರಯ್ಯರವರ ಅಂಗಡಿಯ ಪಕ್ಕದಲ್ಲಿ ಇರುತ್ತದೆ. ಸಾಕ್ಷಿ ಮುಂದುವರೆದು ಶಿಕರಪ್ಪ ಹಾಗೂ ಶಿವರುದ್ರಯ್ಯರವರನ್ನು ಕೇತೋಹಳ್ಳಿಯ ಶಿವರುದ್ರಯ್ಯರವರ ಮನೆಗೆ ಬಿಟ್ಟಿರುತ್ತೇನೆ. ಶಿವರುದ್ರಯ್ಯರವರ ಮನೆಯ ಒಂದು ಭಾಗದಲ್ಲಿ ಅವರ ಅಂಗಡಿ ಇರುತ್ತದೆ.

**12.** ನಾವೆಲ್ಲರೂ ಆಟೋದಲ್ಲಿ ತಾಲ್ಲೂಕು ಕಛೇರಿಯಿಂದ ಬರುವಾಗ ಶಿವರುದ್ರಯ್ಯರವರು ಶಿಕರಪ್ಪರವರನ್ನು ಕುರಿತು ತಾವು ಮತ್ತು ಪಾರ್ವತಮ್ಮರವರು ಕಾಲವಾದ ನಂತರ ಮರಣ ಶಾಸನವನ್ನು ಅವರ **2** ನೇ ಮಗಳಾದ ಬೈರಮ್ಮರವರ ಮಗ ಶ್ರೀನಿವಾಸ್ ಮೂರ್ತಿರವರಿಗೆ ಕೊಡಬೇಕೆಂದು ಹೇಳಿದರು. ಶಿವರುದ್ರಯ್ಯರವರು ಮರಣ ಶಾಸನವನ್ನು ಆಟೋದಲ್ಲಿ ಶಿಕರಪ್ಪರವರಿಗೆ ಕೊಟ್ಟಿದ್ದು ನಂತರ ಯಾರ ಕೈಗೆ ಹೋಗಿರುತ್ತದೆ ನನಗೆ ಗೊತ್ತಿಲ್ಲ. ಮರಣ ಶಾಸನದ ಪ್ರಕಾರ ಕಂದಾಯ ದಾಖಲೆಗಳು ಬದಲಾವಣೆ ಆಗಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಮರಣ ಶಾಸನದ ವಿಷಯವನ್ನು ಟೈಪಿಸ್ಟ್ ರವರು ಓದಿ ಹೇಳಿದ್ದು, ನಾನು ಅದರ ವಿಷಯವನ್ನು ಶಿವರುದ್ರಯ್ಯರವರ ಕಡೆಯಿಂದ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ನಾನು ಮರಣ ಶಾಸನಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನಾನು ರಾಮೋಹಳ್ಳಿಯಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನಾನು ಹಳೆಯ ಆಟೋವನ್ನು ಮಾಡಿದ ನಂತರ ಸೆಕೆಂಡ್ ಹ್ಯಾಂಡಿಗೆ ಎರಡು ಮೂರು ಆಟೋಗಳನ್ನು ಖರೀದಿ ಮಾಡಿದ್ದು ಅವನೆಲ್ಲ ಈಗ ಮಾರಾಟ ಮಾಡಿರುತ್ತೇನೆ.

**13.** ನಾನು ದಿನಾಂಕಃ **05-12-1981** ರಂದು ತಾಲ್ಲೂಕು ಕಛೇರಿಗೆ ಹೋದ ಆಟೋ ನನ್ನ ಮೊದಲ ಆಟೋ ಆಗಿದ್ದು ಅದರ ನಂಬರ್ ಸಿ ಎ ಎಂ **560** ಆಗಿರುತ್ತದೆ. ಅದನ್ನು ನನ್ನ ಹೆಸರಿಗೆ ವರ್ಗಾವಣೆ ಪಡೆದಿರುತ್ತೇನೆ.

**14.** ನಾನು ದಿನಾಂಕಃ **05-12-1981** ರಂದು ಶಿವರುದ್ರಯ್ಯರವರ ಅಂಗಡಿಗೆ ದಿನಸಿ ಖರೀದಿಸಲು

ಹೋಗಿಲ್ಲ, ಶಿವರುದ್ರಯ್ಯರವರು ನನಗೆ 2 ಗಂಟೆಗೆ ತಾಲ್ಲೂಕು ಕಛೇರಿಗೆ ಕರೆದಿಲ್ಲ, ನಾನು ಶಿವರುದ್ರಯ್ಯರವರ ಜೊತೆ ತಾಲ್ಲೂಕು ಕಛೇರಿಗೆ ಹೋಗಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮರಣ ಶಾಸನವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮರಣ ಶಾಸನಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮರಣ ಶಾಸನಕ್ಕೆ ಶಿವರುದ್ರಯ್ಯ ಹಾಗೂ ಶಿಕರಪ್ಪ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. 1981 ರಲ್ಲಿ ನನಗೆ ಡಿ ಎಲ್ ಇರಲಿಲ್ಲ ನನಗೆ ಮೊದಲನೇ ಬಾರಿಗೆ 1991 ರಲ್ಲಿ ಡಿ ಎಲ್ ಬಂದಿರುತ್ತದೆ ಎಂದರೆ 1981 ರಲ್ಲಿ ನನಗೆ ಡಿ ಎಲ್ ಇದ್ದು ಅದು ಕಳೆದು ಹೋಗಿದ್ದು ಆದ ಕಾರಣ 1991 ರಲ್ಲಿ ಹೊಸ ಡಿ ಎಲ್‌ಅನ್ನು ಮಾಡಿಸಿದ್ದೆ. ಶಿವರುದ್ರಯ್ಯರವರು ಶಿಕರಪ್ಪರವರನ್ನು ಕುರಿತು ಮರಣ ಶಾಸನದ ಪ್ರಕಾರ ಹೆಣ್ಣು ಮಕ್ಕಳಿಗೆ ಹಾಗೂ ಗಂಡು ಮಕ್ಕಳಿಗೆ ಆಸ್ತಿಗಳನ್ನು ಕೊಡುವುದರ ಬಗ್ಗೆ ಚರ್ಚೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಟೋದಲ್ಲಿ ಶಿವರುದ್ರಯ್ಯರವರು ಮರಣ ಶಾಸನವನ್ನು ಶಿಕರಪ್ಪರವರಿಗೆ ಇಟ್ಟುಕೊಳ್ಳಲು ಹೇಳಿದ್ದು, ನಾನು ಅದನ್ನು ಕೇಳಿಸಿಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಮರಣ ಶಾಸನದಲ್ಲಿ ನಾನು ಒಂದು ಜಾಗದಲ್ಲಿ ಸಹಿ ಮಾಡಿರುತ್ತೇನೆ. ಮರಣ ಶಾಸನ ಎಷ್ಟು ಪುಟ ಇರುತ್ತದೆ ಗೊತ್ತಿಲ್ಲ. ನಿಡಿ 2 ನ್ನು ಇದೇ ಮೊದಲನೆ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಟೈಪ್ ಆಗುವ ದಿನ ನೋಡಿದ್ದು ದಿನಾಂಕಃ 13-03-2020 ರಂದು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಾಗ ನೋಡಿದ್ದೆ ಎಂದು ಹೇಳುತ್ತಾರೆ. ನಿಡಿ 2 ಕ್ಕೆ ನಾನು ನನ್ನ ಕಡೆಇದ್ದ ಪೆನ್ನಿನಿಂದ ಸಹಿ ಮಾಡಿದ್ದು ಉಳಿದವರು ಯಾವ ಪೆನ್ನಿನಿಂದ ಸಹಿ ಮಾಡಿರುತ್ತಾರೆ ಗೊತ್ತಿಲ್ಲ. ನಿಡಿ 2 ಕ್ಕೆ ಶಿವರುದ್ರಯ್ಯರವರು ನನ್ನ ಸಮಕ್ಷಮ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಶಿವರುದ್ರಯ್ಯರವರ ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಶಿವರುದ್ರಯ್ಯ ಹಾಗೂ ಶಿಕರಪ್ಪ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ಶಿವರುದ್ರಯ್ಯರವರ ಹೆಣ್ಣು ಮಕ್ಕಳಿಗೆ ಆಸ್ತಿ ಬರಬಾರದೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ನೇ ವಾದಿ ಪರ ಶ್ರೀ. ಎಂ ಎಸ್ ಎನ್ ವಕೀಲರಿಂದಃ**

1 ನೇ ವಾದಿ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮಾಗಡಿ.**